**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು–560 001**

**ಸಂಖ್ಯೆಎಂಸಿ4ಮಸಂಶಾಘೋ12/2008–09** **ದಿನಾಂಕ03/11/2009**

## ಜ್ಞಾಪನಾ

ವಿಷಯ:–ಕರ್ನಾಟಕ ರಾಜ್ಯದಲ್ಲಿ ಮತೀಯ ಅಲ್ಪಸಂಖ್ಯಾತ್ರಿರುಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳನ್ನು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸುವ ಬಗ್ಗೆ.

ಉಲ್ಲೇಖ:–1) ಸರ್ಕಾರದ ಅಧಿಸೂಚನೆ ಸಂಖ್ಯೆಇಡಿ4ಎಸ್ಎಂಸಿ 2005 ದಿನಾಂಕ11/09/2007 ಹಾಗೂ ತಿದ್ದುಪಡಿ ದಿನಾಂಕ23/10/2007.

2) ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ5ಎಸ್ಎಂಸಿ2002 ದಿನಾಂಕ20/7/2004

3) ಸರ್ಕಾರದ ತಿದ್ದೋಲೆಸಂಖ್ಯೆಇಡಿ22ಎಂಪಿಎಸ್ 2005 ದಿನಾಂಕ12/12/2006

4) ಉಪನಿರ್ದೇಶಕರುಗಳಿಂದ ಬಂದಿರುವ ಪ್ರಸ್ತಾವನೆಗಳು

--000--

**ಪ್ರಸ್ತಾವನೆ :–**

ಮೇಲಿನ ಉಲ್ಲೇಖ(1)ರಿಂದ(3)ರವರೆಗಿನ ಸರ್ಕಾರಿ ಅಧಿಸೂಚನೆಗಳಲ್ಲಿ ಮತೀಯ ಅಲ್ಪಸಂಖ್ಯಾತರುಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳನ್ನು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸುವ ಬಗ್ಗೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ದಿನಾಂಕ03/11/2009ರಂದು ಪರಿಶೀಲನಾ ಸಮಿತಿ ಸಭೆ ಸೇರಿ ಕೆಳಕಂಡ ಶಿಕ್ಷಣ ಸಂಸ್ಥೆಗಳ ದಾಖಲೆಗಳನ್ನು ಕೂಲಂಕಶವಾಗಿ ಪರಿಶೀಲಿಸಿ, ಮತೀಯ ಅಲ್ಪಸಂಖ್ಯಾತರು ನಡೆಸುತ್ತಿರುವ ಕೆಳಕಂಡ ಶಾಲೆಗಳನ್ನು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸುವ ಬಗ್ಗೆ ಕೆಲವೊಂದು ಷರತ್ತುಗಳನ್ನು ಅನ್ವಯಿಸಿ, ಸದರಿ ಷರತ್ತುಗಳನ್ನು ಪೂರೈಸಿರುವಂತಹ ಶಾಲೆಗಳನ್ನು ಮತೀಯ ಅಲ್ಪಸಂಖ್ಯಾತರ ಶಾಲೆಗಳೆಂದು ಘೋಷಿಸಲು ಸಮಿತಿಯು ತೀರ್ಮಾನಿಸಿತು.

**ಆದೇಶ :–**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಮತೀಯ ಅಲ್ಪಸಂಖ್ಯಾತರು ನಡೆಸುತ್ತಿರುವ ಶಾಲೆಗಳನ್ನು ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸಿ ಆದೇಶಿಸಿದೆ. ಕಾಲಾನುಕಾಲಕ್ಕೆ ಮಾನ್ಯತೆಯನ್ನು ನವೀಕರಿಸುವ ಸಮಯದಲ್ಲಿ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಘೋಷಣೆ ಮಾಡಲಾದ ಮತೀಯ ಅಲ್ಪಸಂಖ್ಯಾತ ಸ್ಥಾನಮಾನವನ್ನು ಹಿಂತೆಗೆದುಕೊಳ್ಳಲಾಗುವುದು.

| ಕ್ರಮ ಸಂಖ್ಯೆ | ಶಿಕ್ಷಣ ಸಂಸ್ಥೆಯ ಹೆಸರು | ಧರ್ಮ | ಶಾಲೆಯ ಹೆಸರು ಮತ್ತು ವಿಳಾಸ |
|---|---|---|---|
| 1 | **ದ ಸಿಸ್ಟರ್ಸ್ ಆಫ್ ಚಾರಿಟಿ ಎಜುಕೇಶನಲ್ ಸೊಸೈಟಿ, ಆಫ್ ಕರ್ನಾಟಕ ಸ್ಟೇಟ್, ಹೋಲಿ ಎಂಜಲ್ಸ್ ಕಾನ್ವೆಂಟ್, ಬೆಲ್ವದೆರೆ, ಮಂಗಳೂರು–575002.** | **ಕ್ರಿಶ್ಚಿಯನ್** | **ಆಶೀರ್ವಾದ ಹಿರಿಯ ಪ್ರಾಥಮಿಕ ಶಾಲೆ, ಕೆ.ಆರ್.ಪೇಟೆ, ಮಂಡ್ಯ ಜಿಲ್ಲೆ–571426** |
| 2 | **ದ ಮೈಸೂರು ಡಯಾಸೀಸನ್ ಎಜುಕೇಶನಲ್ ಸೊಸೈಟಿ, ಸೇಂಟ್ ಜೋಸೆಫ್ಸ್ ಕಾಂಪ್ಲೆಕ್ಸ್, ಜಯಲಕ್ಷ್ಮೀಪುರ, ಮೈಸೂರು–570012** | **ಕ್ರಿಶ್ಚಿಯನ್** | **ಸಂತ ಅಂತೋಣಿ ಪ್ರೌಢಶಾಲೆ(ಆಂಗ್ಲ ಮಾಧ್ಯಮ), ಪೊನ್ನಂಪೇಟೆ, ವಿರಾಜಪೇಟೆ..ತಾ..** |

| | | | |
|---|---|---|---|
| 3 | ಚಮನ್ ಷಾವಲಿ ವಿದ್ಯಾ ಸಂಸ್ಥೆ, ಬೊಮ್ಮನಕಟ್ಟೆ, ನ್ಯೂ ಟೌನ್, ಭದ್ರಾವತಿ-577302 | ಮುಸ್ಲಿಂ | ಚಮನ್ ಷಾವಲಿ ಪ್ರೌಢಶಾಲೆ, ಬೊಮ್ಮನಕಟ್ಟೆ, ನ್ಯೂ ಟೌನ್, ಭದ್ರಾವತಿ-577302 |
| 4 | ಮದರ್ ಮಜೀದ್ ಅಲ್ಪಸಂಖ್ಯಾತರ ವಿದ್ಯಾ ಸಂಸ್ಥೆ, ಮುಸ್ಲಿಂ ಬೀದಿ ಬಂಡಳ್ಳಿ, ಕೊಳ್ಳೇಗಾಲ ತಾ.. | ಮುಸ್ಲಿಂ | ಮದರ್ ಮಜೀದ್ ಹಿರಿಯ ಪ್ರಾಥಮಿಕ ಶಾಲೆ, ಬಂಡಳ್ಳಿ, ಕೊಳ್ಳೇಗಾಲ ತಾಲ್ಲೂಕು. |
| 5 | ಸೆರಫೀನಾ ಎಜುಕೇಶನಲ್ ಸೊಸೈಟಿ, ಡೆಹರಾಡೂನ್ | ಕ್ರಿಶ್ಚಿಯನ್ | ಸೇಕ್ರೆಡ್ ಹಾರ್ಟ್ ಹಿರಿಯ ಪ್ರಾಥಮಿಕ ಶಾಲೆ, ಬೀಸಿನ ಪಾರೆ, ಜಡ್ಕಲ್ ಉಡುಪಿ |
| 6 | ಬೆಥನಿ ವಿದ್ಯಾ ಸಂಸ್ಥೆ, ಬೆಥನಿ ಕಾನ್ವೆಂಟ್, ಬೆಂದೂರು, ಕಂಕನಾಡಿ ಅಂಚೆ, ಮಂಗಳೂರು–575002 | ಕ್ರಿಶ್ಚಿಯನ್ | ಸಂತ ಜೋಸೆಫರ ಪ್ರೌಢಶಾಲೆ, ಕೆ.ಆರ್.ನಗರ–575002 |
| 7 | ದ ಮೈಸೂರು ಡಯಾಸೀಸನ್ ಎಜುಕೇಶನಲ್ ಸೊಸೈಟಿ, ಸೇಂಟ್ ಜೋಸೆಫ್ಸ್ ಕಾಂಪ್ಲೆಕ್ಸ್, ಜಯಲಕ್ಷ್ಮೀಪುರ, ಮೈಸೂರು–570012 | ಕ್ರಿಶ್ಚಿಯನ್ | ಕ್ರಿಸ್ತರಾಜ ಪ್ರೌಢಶಾಲೆ, ಹನೂರು–571439. ಕೊಳ್ಳೆಗಾಲ ತಾಲ್ಲೂಕು |
| 8 | ಅರ್ಸುಲೈನ್ ಫ್ರಾನ್ಸಿಸ್ಕನ್ ಎಜುಕೇಶನಲ್ ಸೊಸೈಟಿ, ಜನರಲೇಟ್ ಸಮರ್ಪಣ್, ದೇರಲಕಟ್ಟೆ, ಮಂಗಳೂರು | ಕ್ರಿಶ್ಚಿಯನ್ | ಸೇಂಟ್ ಮೇರಿಸ್ ಆಂಗ್ಲ ಮಾಧ್ಯಮ ಪ್ರೌಢಶಾಲೆ, ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ. |
| 9 | ಹೆಚ್.ಕೆ.ಎ.ಮೆಮೋರಿಯಲ್ ವಿದ್ಯಾ ಸಂಸ್ಥೆ, ಬಗ್ಗಸಗೋಡು, ಬಣಕಲ್–577113 ಮೂಡಿಗೆರೆ ತಾಲ್ಲೂಕು | ಮುಸ್ಲಿಂ | ರಿವರ್ ವ್ಯೂ ಹಿರಿಯ ಪ್ರಾಥಮಿಕ ಶಾಲೆ, ಬಣಕಲ್–577113 ಮೂಡಿಗೆರೆ ತಾಲ್ಲೂಕು |
| 10 | ದ ಸಿಸ್ಟರ್ಸ್ ಆಫ್ ಚಾರಿಟಿ ಎಜುಕೇಶನಲ್ ಸೊಸೈಟಿ, ಆಫ್ ಕರ್ನಾಟಕ ಸ್ಟೇಟ್, ಹೋಲಿ ಎಂಜಲ್ಸ್ ಕಾನ್ವೆಂಟ್, ಬೆಲ್ವದೆರೆ, ಮಂಗಳೂರು–575002. | ಕ್ರಿಶ್ಚಿಯನ್ | ಸ್ಟೆಲ್ಲಾ ಮಾರಿಸ್ ಆಂಗ್ಲ ಹಿರಿಯ ಪ್ರಾಥಮಿಕ ಶಾಲೆ, 23 ಗಾಯತ್ರಿದೇವಿ ಬಡಾವಣೆ, ವೈಯಾಲಿಕಾವಲ್, ಬೆಂಗಳೂರು–560003 |
| 11 | ದ ಮೈಸೂರು ಡಯಾಸೀಸನ್ ಎಜುಕೇಶನಲ್ ಸೊಸೈಟಿ, ಸೇಂಟ್ ಜೋಸೆಫ್ಸ್ ಕಾಂಪ್ಲೆಕ್ಸ್, ಜಯಲಕ್ಷ್ಮೀಪುರ, ಮೈಸೂರು–570012 | ಕ್ರಿಶ್ಚಿಯನ್ | ಕ್ರಿಸ್ತರಾಜ ಕನ್ನಡ ಹಿರಿಯ ಪ್ರಾಥಮಿಕ ಶಾಲೆ, ಹನೂರು–571439. ಕೊಳ್ಳೆಗಾಲ ತಾಲ್ಲೂಕು |
| 12 | ಅಲ್ ಅಸ್ಮತ್ ಎಜುಕೇಶನ್ ಟ್ರಸ್ಟ್, ದೊಣಬಘಟ್ಟ, ಭದ್ರಾವತಿ ತಾ.. | ಮುಸ್ಲಿಂ | ಮಾಡಲ್ ಉರ್ದು ಹಿರಿಯ ಪ್ರಾಥಮಿಕ ಶಾಲೆ, ದೊಣಬಘಟ್ಟ, ಭದ್ರಾವತಿ ತಾ.. |
| 13 | ನ್ಯೂಕಾಸ್ಮೋ ಎಜುಕೇಶನ್ ಸೊಸೈಟಿ, ನಂ.5. ಪಿಅಂಡ್ ಟಿ, ಕಾಲೋನಿ ಆರ್.ಟಿ.ನಗರ, ಬೆಂಗಳೂರು–32 | ಮುಸ್ಲಿಂ | ಫ್ಲಾರೆನ್ಸ್ ಪಬ್ಲಿಕ್ ಸ್ಕೂಲ್, ಪಿ ಅಂಡ್ ಟಿ ಕಾಲೋನಿ, ಆರ್.ಟಿ.ನಗರ, ಬೆಂಗಳೂರು |

| | | | |
|---|---|---|---|
| 14 | ನ್ಯೂಕಾಸ್ಮೋ ಎಜುಕೇಶನ್ ಸೊಸೈಟಿ, ನಂ.5. ಪಿಅಂಡ್ ಟಿ, ಕಾಲೋನಿ ಆರ್.ಟಿ.ನಗರ, ಬೆಂಗಳೂರು-32 | ಮುಸ್ಲಿಂ | ಕ್ಲಾರೆನ್ಸ್ ಪಬ್ಲಿಕ್ ಸ್ಕೂಲ್, ಡಾಲರ್ಸ್ ಕಾಲೋನಿ, ಜೆ.ಪಿ.ನಗರ 4ನೇ ಹಂತ, ಬೆಂಗಳೂರು |
| 15 | ನ್ಯೂಕಾಸ್ಮೋ ಎಜುಕೇಶನ್ ಸೊಸೈಟಿ, ನಂ.5. ಪಿಅಂಡ್ ಟಿ, ಕಾಲೋನಿ ಆರ್.ಟಿ.ನಗರ, ಬೆಂಗಳೂರು-32 | ಮುಸ್ಲಿಂ | ಕಾರ್ಮೆಲ್ ಇಂಗ್ಲೀಷ್ ಸ್ಕೂಲ್, ಬನಶಂಕರಿ 2ನೇ ಹಂತ, ಪದ್ಮನಾಭನಗರ, ಬೆಂಗಳೂರು |
| 16 | ದ ಮೈಸೂರು ಡಯಾಸೀಸನ್ ಎಜುಕೇಶನಲ್ ಸೊಸೈಟಿ, ಸೇಂಟ್ ಜೋಸೆಫ್ಸ್ ಕಾಂಪ್ಲೆಕ್ಸ್, ಜಯಲಕ್ಷ್ಮೀಪುರ, ಮೈಸೂರು-570012 | ಕ್ರಿಶ್ಚಿಯನ್ | ಫಾತಿಮಾ ಪ್ರೌಢಶಾಲೆ, ಕುಶಾಲನಗರ, ಸೋಮವಾರಪೇಟೆ, ಮಡಿಕೇರಿ ಜಿಲ್ಲೆ |

ಷರತ್ತುಗಳು

1) ಶಾಲೆಗಳನ್ನು ನಡೆಸುವ ಆಡಳಿತ ಮಂಡಳಿಯು ಟ್ರಸ್ಟ್/ಸೊಸೈಟಿ ನೊಂದಣಿ ಕಾಯ್ದೆ ಪ್ರಕಾರ ನೊಂದಣಿಯಾಗಿರಬೇಕು. ಹಾಗೂ ಕಾಲಕಾಲಕ್ಕೆ ನವೀಕರಿಸಿರಬೇಕು.
2) ಶಾಲೆಗಳ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದು, ಆಯಾಯ ಮತೀಯ ಅಲ್ಪಸಂಖ್ಯಾತರ ಸಂಖ್ಯೆ ಕನಿಷ್ಟ ಮೂರನೆ ಎರಡರಷ್ಟಿರಬೇಕು.
3) ಶಾಲೆಗಳನ್ನು ನಡೆಸುವ ಮತೀಯ ಅಲ್ಪಸಂಖ್ಯಾತ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದರೆ ಅಂತಹ ಸದಸ್ಯರು ಸಂಬಂಧಿಸಿದ ತಹಶೀಲ್ದಾರರಿಂದ ಜಾತಿ ಪ್ರಮಾಣ ಪತ್ರವನ್ನು ಪಡೆದಿರಬೇಕು.
4) ಮತೀಯ ಅಲ್ಪಸಂಖ್ಯಾತರು ನಡೆಸುತ್ತಿರುವ ಪ್ರಾಥಮಿಕ/ಪ್ರೌಢಶಾಲೆಗಳನ್ನು ನಡೆಸಲು ಕರ್ನಾಟಕ ಶಿಕ್ಷಣ ಕಾಯ್ದೆಯಡಿಯಲ್ಲಿ ಇಲಾಖೆಯಿಂದ ನೊಂದಾಯಿಸಿರಬೇಕು, ಮತ್ತು ಕಾಲಕಾಲಕ್ಕೆ ಶಾಲಾ ಮಾನ್ಯತೆಯನ್ನು ನವೀಕರಿಸಿರಬೇಕು. ಹಾಗೂ ಇತ್ತೀಚಿನ ಮಾನ್ಯತೆ ನವೀಕರಣ ಪತ್ರ ಹೊಂದಿರತಕ್ಕದ್ದು.
5) ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯವರು ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಸಂಬಂಧ, ಆಯಾಯ ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಪ್ರದೇಶದಲ್ಲಿ ವಾಸಿಸುತ್ತಿರುವ ಆಯಾಯ ಅಲ್ಪಸಂಖ್ಯಾತ ಸಮುದಾಯದ ಜನಗಣತಿಗೆ ತಕ್ಕಂತೆ, ಆಯಾಯ ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಕಾಪಾಡಿಕೊಳ್ಳಲು ಆಯಾಯ ವರ್ಗದ ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳನ್ನು ಕನಿಷ್ಟ ಅದೇ ಪ್ರಮಾಣದಲ್ಲಿ ದಾಖಲು ಮಾಡಿಕೊಳ್ಳತಕ್ಕದ್ದು.
5) ಶಾಲೆಗಳನ್ನು ನಡೆಸುತ್ತಿರುವ ಆಡಳಿತ ಮಂಡಳಿಯು ಆಯಾ ಮತೀಯ ಅಲ್ಪಸಂಖ್ಯಾತ(ಕ್ರಿಶ್ಚಿಯನ್, ಮುಸ್ಲಿಂ,ಜೈನ,ಬೌದ್ಧ, ಸಿಖ್) ರೆಂದು ಖಚಿತ ಪಡಿಸಿಕೊಳ್ಳತಕ್ಕದ್ದು.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

3/11/09

ಪ್ರತಿಗಳನ್ನು

1) ಸರ್ಕಾರದ ಕಾರ್ಯದರ್ಶಿಗಳು, (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-01 ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ನಿರ್ದೇಶಕರು, ಪ್ರೌಢಶಿಕ್ಷಣ ಹಾಗೂ ಪ್ರಾಥಮಿಕ ಶಿಕ್ಷಣ ಸಾ.ಶಿ.ಇ. ಆಯುಕ್ತರ ಕಛೇರಿ, ಬೆಂಗಳೂರು-01 ಇವರಿಗೆ ಮಾಹಿತಿಗಾಗಿ ಕಳುಹಿಸಿದೆ

3) ಉಪನಿರ್ದೇಶಕರು, ಸಾ.ಶಿ.ಇಲಾಖೆ, ಬೆಂಗಳೂರು ನಗರ ಉತ್ತರ ಮತ್ತು ದಕ್ಷಿಣ , ಮೈಸೂರು, ಮಡಿಕೇರಿ, ಶಿವಮೊಗ್ಗ, ಚಿಕ್ಕಮಗಳೂರು, ಮಂಗಳೂರು, ಚಾಮರಾಜನಗರ, ಮಂಡ್ಯ, ಉಡುಪಿ ಇವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

4) ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬೆಂಗಳೂರು ಉತ್ತರ ವಲಯ–2, ಉತ್ತರ ವಲಯ–3, ದಕ್ಷಿಣವಲಯ–1, ಕೆ.ಆರ್.ಪೇಟೆ, ಭದ್ರಾವತಿ, ತೀರ್ಥಹಳ್ಳಿ, ವಿರಾಜಪೇಟೆ, ಸೋಮವಾರಪೇಟೆ, ಭದ್ರಾವತಿ, ಚಾಮರಾಜನಗರ, ಹನೂರು ವಲಯ ಕೊಳ್ಳೆಗಾಲ ತಾ.., ಬೈಂದೂರು ವಲಯ ಕುಂದಾಪುರ ತಾ.. ಮೂಡಿಗೆರೆ, ಕೆ.ಆರ್.ನಗರ, ಇವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

5) ಸಂಬಂಧಿಸಿದ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು/ಕಾರ್ಯದರ್ಶಿಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

6) ಸಂಬಂಧಿಸಿದ ಶಾಲಾ ಮುಖ್ಯ ಶಿಕ್ಷಕರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

7) ಕಛೇರಿ ಪ್ರತಿ